**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1902/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಆದರ್ಶ್ ಕುಮಾರ್ ಜಿ.ಆರ್ | ಪ್ರಾಸಾ-10 |
| ತಂದೆಯ ಹೆಸರು | : ರಾಮಣ್ಣ ಜಿ.ಕೆ | ಚಾಸಾ-23 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ. | ದಿನಾಂಕಃ 09.06.2026. |
| ವಾಸಸ್ಥಳ | : ಚಿಕ್ಕಮಗಳೂರು ಗ್ರಾಮಾಂತರ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ದಿ.19.01.2025 ರಿಂದ ದಿ.12.02.2025 ರವರೆಗೂ ಕಳಸ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.03.02.2025 ರಂದು ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಿಕ್ಕಮಗಳೂರಿನ ಪೊಲೀಸ್ ಅಧೀಕ್ಷಕರಿಗೆ ಸೋಕೋ Officers ನ್ನು ಕಳುಹಿಸಿಕೊಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ಅದೇ ದಿನ ಆರೋಪಿಯು ಸ್ಥಳ ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಮಹಜರ್ ನ್ನು ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ರಕ್ತದ ಕಲೆಗಳಿರುವ ಕಲ್ಲುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಮ.2.20 ರಿಂದ 3.20 ರವರೆಗೆ ಬರವಣಿಗೆ ಮಾಡಲಾಗಿರುತ್ತದೆ. ಅದೇ ದಿನ ಆರೋಪಿಯು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಇನ್ನೊಂದು ಅಮಾನತ್ ಮಹಜರ್ ನ್ನು ಜರುಗಿಸಿ, ಆರೋಪಿಯ ಮನೆಯಲ್ಲಿ ಒಂದು ಖಾಲಿ ಪ್ಲಾಸ್ಟಿಕ್ ಡಬ್ಬ, ವಿವಿಧ ಗಾತ್ರದ ಸೀಸದ ಬಾಲ್ ಗಳಿರುವ ಎರಡು ಡಬ್ಬಗಳು, ಬಂದೂಕಿನ ಕೇಪುಗಳಿರುವ ಒಂದು ಡಬ್ಬ, ಗನ್ ಪೌಡರ್ ನಂತಿರುವ ಪೌಡರ್ ಇರುವ ಒಂದು ಬಾಟಲ್, ಮುಷ್ಟಿಗಾತ್ರದ ತೆಂಗಿನ ಕತ್ತ ಮತ್ತು 59 ಇಂಚು ಇರುವ ಒಂದು ಬಂದೂಕನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಸದರಿ ಮಹಜರ್ ನ್ನು ಸ.3.30 ರಿಂದ 4.30 ರವರೆಗೂ ಬರವಣಿಗೆ ಮಾಡಲಾಗಿರುತ್ತದೆ. ದಿ.04.02.2025 ರಂದು ಆರೋಪಿಗೆ ಕಲಂ 35(3) ರ ಬಿ.ಎನ್.ಎಸ್.ಎಸ್. ರಡಿಯಲ್ಲಿ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ.

ಆರೋಪಿಯು ಸದರಿ ನೋಟೀಸಿನ ಮೇರೆಗೆ ಹಾಜರಾಗಿ ಮಹಜರ್ ಕಾಲದಲ್ಲಿ ವಶಪಡಿಸಿಕೊಂಡಂತಹ ಬಂದೂಕು ತಮ್ಮದೇ ಆಗಿರುತ್ತದೆ ಎಂದು ಒಪ್ಪಿಕೊಂಡು ಸದರಿ ಬಂದೂಕಿನ ಪರವಾನಿಗೆಯನ್ನು ಹಾಜರುಪಡಿಸಿರುತ್ತಾರೆ. ಸದರಿ ಪರವಾನಿಗೆಯ ಬಾಬ್ತು ದಿ.06.02.2025 ರಂದು ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರ್ ಜರುಗಿಸಿ ಪರವಾನಿಗೆಯನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಸ.6.00 ರಿಂದ 7.30 ರವರೆಗೆ ಬರವಣಿಗೆ ಮಾಡಿಕೊಳ್ಳಲಾಗಿರುತ್ತದೆ. ದಿ.03.02.2025 ರಂದು ಮಂಗಳೂರಿನ ಎ.ಜೆ. ಆಸ್ಪತ್ರೆಗೆ ಚಾಸಾ-1 ರವರ ಹಲ್ಲೆಯಾದ ಸಮಯದಲ್ಲಿ ಬಂದೂಕಿನ ಕುರುಹುಗಳು ಅವರ ದೇಹದಲ್ಲಿ ಇದ್ದ ಬಗ್ಗೆ, ಅವರ ರಕ್ತದ ಗುಂಪಿನ ಬಗ್ಗೆ ಮತ್ತು ಚಾಸಾ-1 ರವರು ಹಲ್ಲೆಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು

ಸಂಗ್ರಹಿಸಿ ಕೊಡುವಂತೆ ಮನವಿಯನ್ನು ಮಾಡಿಕೊಂಡಿರುತ್ತೇನೆ. ದಿ.08.02.2025 ರಂದು ಸದರಿಯವರಿಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಆದರೆ ಚಾಸಾ-1 ರವರಿಗೆ ಸಂಬಂಧಿಸಿದ ಬಟ್ಟೆಗಳನ್ನು ಸಂಗ್ರಹಿಸಿರುವುದಿಲ್ಲ. ಸದರಿಯವರು ಚಾಸಾ-1 ರವರ ಬಲಗೈನ ಕುರುಹಿನ ಬಗ್ಗೆ ವರದಿಯನ್ನು ನೀಡಿರುತ್ತಾರೆ ಆದರೆ ಸದರಿಯವರಿಗೆ ಹಲ್ಲೆಯಾಗಿದ್ದ ಎಡಗೈಗೆ ಶಸ್ತ್ರ ಚಿಕಿತ್ಸೆ ಆಗಿದ್ದ ಕಾರಣ ಕುರುಹುಗಳ ಬಗ್ಗೆ ಸಂಗ್ರಹಿಸಲು ಸಾದ್ಯವಾಗಿರುವುದಿಲ್ಲ ಎಂದು ವರದಿಯನ್ನು ನೀಡಿರುತ್ತಾರೆ. ಮಹಜರ್ ನಲ್ಲಿ ಅಮಾನತುಪಡಿಸಿಕೊಂಡ ಕಲ್ಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚಾಸಾ-16 ಮತ್ತು 17 ರವರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-24 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ದಿ.03.02.2025 ರಂದು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಬರೆದ ಮನವಿ ಪತ್ರದಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-20, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.03.02.2025 ರಂದು ಪಂಚರಿಗೆ ನೀಡಿದ ನೋಟೀಸ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟೀಸನ್ನು ನಿಪಿ-21, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3, 4, 7 ಮತ್ತು 8 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3(ಸಿ), 4(ಡಿ), 7(ಸಿ) ಮತ್ತು 8(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5, 6 ಮತ್ತು 9 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನಿಪಿ-10 ಮತ್ತು 11 ರಲ್ಲಿ ಕಾಣುವ ಬಂದೂಕನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ದಿ.03.02.2025 ರಂದು ಚಾಸಾ-13 ರವರಿಗೆ ಬರೆದ ಮನವಿ ಪತ್ರದಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿ ಪತ್ರವನ್ನು ನಿಪಿ-22, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.03.02.2025 ರಂದು ಸ್ವೀಕರಿಸಿಕೊಂಡ ಕಲಂ 63(4)(3) ಪ್ರತಿ ಮತ್ತು ಸಿಡಿಗಳ ಮೇಲೆ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದೃಢೀಕೃತಿ ಪ್ರತಿಯನ್ನು ಕ್ರಮವಾಗಿ ನಿಪಿ-23 ರಿಂದ 28, ಸಾಕ್ಷಿಯ ಸಹಿಗಳನ್ನು ನಿಪಿ-23(ಎ) ರಿಂದ 28(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 5 ರ ಮೇಲೆ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಎಂ.ಒ.1(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿರುವ ಐದು ಕಲ್ಲುಗಳನ್ನು ನೋಡಿ ಗುರುತಿಸಿದ್ದು, ಒಂದು ಬಿಳಿ ಬಟ್ಟೆಯನ್ನು ಎಂ.ಒ.6 ಮತ್ತು 5 ಕಲ್ಲುಗಳನ್ನು ಒಟ್ಟಾಗಿ ಎಂ.ಒ.7, ಸಾಕ್ಷಿಯ ಸಹಿಯನ್ನು ಎಂ.ಒ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಚಾಸಾ-13 ರವರಿಂದ ಸ್ವೀಕರಿಸಿಕೊಂಡ ಜಿ.ಎಸ್.ಆರ್. ಸ್ವಾಬ್ಸ್ ನ ಟ್ಯೂಬ್ ನ ಮೂರು ವರದಿಯ ಮೇಲೆ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಟ್ಯೂಬ್ ನ್ನು ಕ್ರಮವಾಗಿ ಎಂ.ಒ.8 ರಿಂದ 10 ಸಾಕ್ಷಿಯ ಸಹಿಗಳನ್ನು ಎಂ.ಒ.8(ಎ) ರಿಂದ 10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**

ದಿ.03.02.2025 ರಂದು ಚಾಸಾ-20 ರವರಿಂದ ನಾನು ಕೇವಲ ಕಡತವನ್ನು ಮಾತ್ರ ಸ್ವೀಕರಿಸಿಕೊಂಡಿರುತ್ತೇನೆ. ಸದರಿ ದಿನ ಆರೋಪಿಯು ನನ್ನ Custody ಅಲ್ಲಿ ಇರುವುದಿಲ್ಲ. ಸದರಿ ದಿನ ಆರೋಪಿಯು ಪ್ರಸ್ತುತ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿರುವುದಿಲ್ಲ. ನಿಪಿ-4 ರಲ್ಲಿ ಎಷ್ಟು ಕಲ್ಲುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ನಮೂದಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವರದಿಯನ್ನು ಸೋಕೋ ಆಫೀಸರ್ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಒ.7 ನ್ನು ನಿಪಿ-4 ನ್ನು ಬರೆಯುವ ಕಾಲದಲ್ಲಿ ಸೋಕೋ ಆಫೀಸರ್ ಗಳು ನನಗೆ ನೀಡಿರುತ್ತಾರೆ. ಅದರ ಬಾಬ್ತು ಆರೋಪಿ ಮತ್ತು ಪಂಚರ ಸಮಕ್ಷಮ ಫೋಟೋಗಳನ್ನು ತೆಗೆಯಲಾಗಿರುತ್ತದೆ. ನಿಪಿ-5 ರಲ್ಲಿ ನ್ಯಾಯಾಲಯದ ಮುಂದಿರುವ ಎಂ.ಒ.7 ಕಾಣುತ್ತಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಂದು ಪ್ರಕರಣದಲ್ಲಿ ವಸ್ತುಗಳನ್ನು ಅಮಾನತುಪಡಿಸಿಕೊಂಡಲ್ಲಿ ಅವುಗಳ ಬಗ್ಗೆ ಸ್ವತ್ತಿನ ಪಟ್ಟಿಯಲ್ಲಿ ವಿವರಿಸಲಾಗುತ್ತದೆ ಮತ್ತು ಫೋಟೋವನ್ನು ತೆಗೆಯಲಾಗುತ್ತದೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ಸ್ವತ್ತಿನ ಪಟ್ಟಿಯಲ್ಲಿ ಎಷ್ಟು ಕಲ್ಲುಗಳನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ನಮೂದಿಸಿರುವುದಿಲ್ಲ. ಸದರಿ ಕಲ್ಲಿನ ಚಹರೆ ಬಗ್ಗೆ ಸ್ವತ್ತಿನ ಪಟ್ಟಿ ಮತ್ತು ಮಹಜರ್ ನಲ್ಲಿ ನಮೂದಿಸಿರುವುದಿಲ್ಲ.

ನ್ಯಾಯಾಲಯದ ಮುಂದಿರುವ ಎಂ.ಒ.7 ರ ಮೂರು ಕಲ್ಲುಗಳಲ್ಲಿ ರಕ್ತದ ಕಲೆಗಳು ಇದ್ದು 2 ಕಲ್ಲುಗಳಲ್ಲಿ ಕಲೆಗಳು ಕಂಡುಬರುತ್ತಿಲ್ಲ, ಅವುಗಳಲ್ಲಿ ದೊಡ್ಡ ಕಲ್ಲಿನ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂದರೆ ಸರಿ. ಎಂ.ಒ.7 ರ ಮೇಲಿರುವ ರಕ್ತದ ಕಲೆಯು ಚಾಸಾ-1 ರವರ ರಕ್ತದ ಕಲೆ ಎಂದು ಖಚಿತಪಡಿಸಿಕೊಳ್ಳಲು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲಾಗಿರುತ್ತದೆ. ರಾಸಾಯನಿಕ ಪರೀಕ್ಷೆಗೆ ನಾವು ಚಾಸಾ-1 ರವರ ರಕ್ತದ ಮಾದರಿಯನ್ನು ಪಡೆದುಕೊಂಡಿರುವುದಿಲ್ಲ ಬದಲಿಗೆ ಅವರನ್ನು ದಾಖಲು ಮಾಡಿದ್ದ ಆಸ್ಪತ್ರೆಗೆ ಮನವಿಯನ್ನು ಮಾಡಿಕೊಳ್ಳಲಾಗಿರುತ್ತದೆ. ಎಂ.ಒ.7 ರ ಮೇಲಿರವ ರಕ್ತವು ಚಾಸಾ-1 ರವರಿಗೆ ಸೇರಿದ್ದಾಗಿರುತ್ತದೆ ಎಂದು ನಾನು ಯಾವುದೇ ವರದಿಯನ್ನು ಸ್ವೀಕರಿಸಿಕೊಂಡಿರುವುದಿಲ್ಲ. ನಿಪಿ-9 ರಿಂದ 11 ರಲ್ಲಿ ಆರೋಪಿ, ಚಾಸಾ-1 ರವರಾಗಲೀ ಅಥವಾ ಮಹಜರ್ ಸಾಕ್ಷಿದಾರರಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ದಿ.03.02.2025 ರಂದು ಸೋಕೋ ಸಿಬ್ಬಂಧಿಗಳು ಸ್ಥಳಕ್ಕೆ ಹಾಜರಾಗಿದ್ದರೂ, ಸದರಿ ಸಮಯದಲ್ಲಿ ಎಂ.ಒ.7 ರ ಮೇಲೆ ಚಾಸಾ-1 ರವರ ರಕ್ತದ ಕಲೆ ಇತ್ತು ಮತ್ತು ಅದನ್ನು ನಾನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.03.02.2025 ರಂದು ಆರೋಪಿಯ ಮನೆಯಿಂದ ವಶಪಡಿಸಿಕೊಂಡಂತಹ ವಸ್ತುಗಳನ್ನು ಒಟ್ಟಾಗಿ ಇರಿಸಿ ಫೋಟೋವನ್ನು ತೆಗೆದಿರುತ್ತೇನೆ.

ನಾನು ತನಿಖೆ ಸಮಯದಲ್ಲಿ ಯಾವ ವಸ್ತುಗಳನ್ನು ವಶಕ್ಕೆ ಪಡೆದಿರುತ್ತೇವೆ ಎಂಬುದರ ಬಗ್ಗೆ ಅಂತಿಮ ವರದಿಯೊಟ್ಟಿಗೆ ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ ಎಂದರೆ ಸರಿ. ಆರೋಪಿಯ ಮನೆಯಲ್ಲಿ ವಶಪಡಿಸಿಕೊಂಡ ವಸ್ತುಗಳು ಫೋಟೋಗಳನ್ನು ಈ ದಿನ ನ್ಯಾಯಾಲಯದಲ್ಲಿ ನಾನು ಗುರುತಿಸಿರುವುದಿಲ್ಲ. ಎಂ.ಒ.1 ರಿಂದ 5 ರಂತಹ ವಸ್ತುಗಳನ್ನು ಸಾಮಾನ್ಯವಾಗಿ ಪರವಾನಿಗೆ

ಹೊಂದಿದಂತಹ ಅಂಗಡಿಗಳಲ್ಲಿ ವ್ಯಾಪಾರಕ್ಕೆ ಇಟ್ಟಿರುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕಾಗಿ ಅಂತಹ ವಸ್ತುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿ.08.02.2025 ರಂದು ಚಾಸಾ-17 ರವರಿಗೆ ಮನವಿ ಮಾಡಿಕೊಂಡಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ-3, 4 ನ್ನು ಠಾಣೆಯಲ್ಲಿ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.